UASB Library
Newspaper Clippings
Monday 28-03-2022 Pg .1
Jai Kisan

ಪ್ರಕೃತಿಯ ಮುನಿಸು ಮಾವು ಬೆಳೆಗಾರರಿಗೆ ಬಿಸಿ ತಟ್ಟಿಸಿದೆ. ನವೆಂಬರ್‌ನಲ್ಲಾದ ಮಳೆಯಿಂದ ಹೂವು ಬಿಡುವುದು ವಿಳಂಬವಾಗಿದೆ. ಅಲ್ಲದೆ, ಇಬ್ಬನಿಯಿಂದ ಹೂವು ಉದುರಿವೆ. ಫಸಲು ಎರಡು ತಿಂಗಳು ವಿಳಂಬವಾಗಿದ್ದು, ಈಗ ಸುರಿಯುತ್ತಿರುವ ಅಡ್ಡಮಳೆ ಕೈಗೆ ಬಂದ ತುತ್ತು ಬಾಯಿಗೆ ಬರದಂತೆ ಮಾಡುತ್ತಿದೆ. ಈ ಬಾರಿ ಶೇ.25 ಇಳುವರಿ ಬಂದರೆ ಸಾಕು ಎನ್ನುವಂತಾಗಿದೆ. ಕಳೆದ ನಾಲ್ಕು ವರ್ಷದಿಂದ ಮಾವು ಹಣ್ಣಿನ ಬೆಲೆಯೂ ಹೆಚ್ಚಾಗಿಲ್ಲ. ಹಾಗಾಗಿ ಪರ್ಯಾಯ ಬೆಳೆಯ ಕಡೆಯೂ ರೈತ ಚಿಂತಿಸುವಂತಾಗಿದೆ.

vittasuggi@gmail.com
ವಿತ್ತವಾಣಿ
ಮನೆ ಮನೆಯ ಮನಿಮಾತು



ವಾತಾವರಣದಲ್ಲಿ ಏರುಪೇರು, ಅಕಾಲಿಕ ಮಳೆಗೆ ಬೆಳೆ ಹಾಳು

ಮಾವು ನೋವು

■ ವಿಜಯವಾಣಿ ವಿಶೇಷ ಧಾರವಾಡ/ವಿಜಯಪುರ

ಮಾವು ಹಣ್ಣುಗಳ ರಾಜ. ಮಾವು ಬೆಳೆ ಪ್ರಧಾನವಾಗಿರುವ ಧಾರವಾಡ ಜಿಲ್ಲೆಯನ್ನು ಮಾವಿನ ಹಣ್ಣಿನ ಕಣಜ ಎನ್ನಲಾಗುತ್ತದೆ. ಈ ಮಾವಿನ ಹಣ್ಣಿನ ಪರಿಮಳ ರಾಜ್ಯವಷ್ಟೇ ಅಲ್ಲ, ಮುಂಬೈ ಮೂಲಕ ಅರಬ್ ರಾಷ್ಟ್ರಗಳಲ್ಲೂ ಖ್ಯಾತಿ ಪಡೆದಿದೆ. ಅದರಲ್ಲೂ ಅಲ್ಫಾನ್ಸೋ ಮಾವಿಗೆ ವಿದೇಶಗಳಲ್ಲಿ ಎಲ್ಲಿಲ್ಲದ ಬೇಡಿಕೆ. ಇಂಥ ಮಾವಿನ ಹಣ್ಣಿನ ರುಚಿ ಸವಿಯಲು ಮಾವುಪ್ರಿಯರು ಕಾದು ಕುಳಿತಿದ್ದರೆ, ಈ ಬಾರಿ ಪ್ರಕೃತಿಯ ಮುನಿಸು ಬೆಳೆಗಾರರನ್ನು ಕಂಗೆಡಿಸಿದೆ. ಜಿಲ್ಲೆಯ ಮಾವು ಬೆಳೆಗಾರರು ಸತತ 2 ವರ್ಷಗಳಿಂದ ಹವಾಮಾನ ವೈಪರೀತ್ಯದಿಂದ ಕೈ ಸುಟ್ಟುಕೊಂಡಿದ್ದಾರೆ. ಈ ಬಾರಿಯೂ ನವೆಂಬರ್‌ನಲ್ಲಾದ ಅಕಾಲಿಕ ಮಳೆಯಿಂದಾಗಿ ಮಾವು ಫಸಲು ಕೈಗೆಟುಕುವುದು ವಿಳಂಬವಾಗಿದೆ. ಪ್ರತಿವರ್ಷ ನವೆಂಬರ್‌ನಲ್ಲಿ ಮಾವಿನ ಗಿಡಗಳು ಹೂ ಬಿಟ್ಟು ಡಿಸೆಂಬರ್ 2 ಅಥವಾ 3ನೇ ವಾರದಲ್ಲಿ ಹೀಚುಗಳು ಕಾಣಿಸುತ್ತಿದ್ದವು. ಮಾರ್ಚ್ ಕೊನೆಯಲ್ಲಿ ಅಥವಾ ಏಪ್ರಿಲ್ 2ನೇ ವಾರದವರೆಗೆ ಫಸಲು ಬರುತ್ತಿತ್ತು. ಪ್ರಸಕ್ತ ಹಂಗಾಮಿನಲ್ಲಿ ಮಾವು ಅಕಾಲಿಕ ಮಳೆಯ ಹೊಡೆತಕ್ಕೆ ಸಿಲುಕಿದೆ. ಹೂವು ಬಿಡುವ ಪ್ರಕ್ರಿಯೆ 45 ದಿನ ವಿಳಂಬವಾಗಿದೆ. ಹಾಗಾಗಿ ಏಪ್ರಿಲ್ ಅಂತ್ಯಕ್ಕೆ ಫಸಲು ಕೈಗೆ ಬರುವ ನಿರೀಕ್ಷೆ ಇದೆ. ಈ ನಡುವೆ ಮಾರ್ಚ್ ಕೊನೆಯಲ್ಲಿ ಅಕಾಲಿಕ ಮಳೆಯಾಗುತ್ತಿದ್ದು, ಮತ್ತೊಂದು ಸಂಕಷ್ಟ ತಂದೊಡ್ಡಿದೆ.

ರಾಜ್ಯದ ಧಾರವಾಡ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಮಾವು ಬೆಳೆಯುವ ಪ್ರಮುಖ ಜಿಲ್ಲೆಗಳು. ಅದರಲ್ಲೂ ಧಾರವಾಡದ ಆಪೂಸ್ ಮಾವು ಫ್ರಿಯರ ಅಚ್ಚುಮೆಚ್ಚಿನ ಹಣ್ಣು. ಕಳೆದ ವರ್ಷ ಮಾವು ಫಸಲು ಕೈಗೆಟುಕುವ ಸಂದರ್ಭದಲ್ಲಿ ಕೋವಿಡ್ 2ನೇ ಲಾಕ್‌ಡೌನ್ ಜಾರಿಯಾಗಿತ್ತು. ಕೈಗೆ ಬಂದಷ್ಟು ಬೆಳೆಯನ್ನು ಮಾರಾಟ ಮಾಡುವಲ್ಲಿ ಬೆಳೆಗಾರರು ಹೈರಾಣಾಗಿದ್ದರು. ವಿಶೇಷವೆಂದರೆ, ಕರೊನಾ 2ನೇ ಅಲೆ ಲಾಕ್‌ಡೌನ್ ಮಧ್ಯೆಯೂ ಧಾರವಾಡದ ಆಪೂಸ್ ಮಾವು ಮುಂಬೈ ಮೂಲಕ ಅರಬ್ ರಾಷ್ಟ್ರವಲ್ಲದೆ ಅಮೆರಿಕ, ಆಸ್ಟ್ರೇಲಿಯಾಕ್ಕೆ ರಫ್ತಾಗಿತ್ತು.

ಮರೆಯಾದ ತಳಿಗಳು: ಜಿಲ್ಲೆಯಲ್ಲಿ ಈ ಮೊದಲು ಹತ್ತಾರು ಮಾವು ತಳಿಗಳಿದ್ದವು. ಗುಟ್ಲಿ, ಸಕ್ಕರೆ ಗುಟ್ಲಿ, ಕಲ್ಮಿ, ಬಾಳಮಾವು, ಗುಂಗ ಮಾವು, ಜೀರಿಗೆ ಮಾವು, ಈಬತ್ತಿ ಮಾವು, ಗಿಳಿಮಾವು, ಹೋಳಿಗೆಮಾವು, ಸಬ್ಬಸಗಿ ಮಾವು, ರತ್ನಾಗಿರಿ, ಮಲ್ಲಿಕಾ ತಳಿಗಳು ಅಸ್ತಿತ್ವದಲ್ಲಿದ್ದವು. ಈಗ ಹಲವು ತಳಿಗಳು ಮರೆಯಾಗಿ ಆಪೂಸ್ ಆವರಿಸಿಕೊಂಡಿದೆ.



1 ಲಕ್ಷ ಮೆ. ಟನ್ ಉತ್ಪಾದನೆ ನಿರೀಕ್ಷೆ

ಧಾರವಾಡ, ಕಲಘಟಗಿ, ಹುಬ್ಬಳ್ಳಿ, ಅಳ್ನಾವರ ಭಾಗದಲ್ಲಿ ಮಾವು ಬೆಳೆಗೆ ಪೂರಕ ವಾತಾವರಣವಿದೆ. ಮುಮ್ಮಿಗಟ್ಟಿ, ಗರಗ, ತೇಗೂರ, ನೀರಲಕಟ್ಟಿ, ಹಂಗರಕಿ, ನರೇಂದ್ರ, ಕೆಲಗೇರಿ, ನಿಗದಿ, ಮುಗದ, ಕ್ಯಾರಕೊಪ್ಪ, ದೇವರಹುಬ್ಬಳ್ಳಿ ಗ್ರಾಮಗಳ ರೈತರು ಬಹುಪಾಲು ಮಾವು ಬೆಳೆಯನ್ನು ಆವಲಂಬಿಸಿದ್ದಾರೆ. ಜಿಲ್ಲೆಯಲ್ಲಿ ಅಂದಾಜು 12,500 ಹೆಕ್ಟೇರ್ ಮಾವು ಬೆಳೆ ಇದ್ದು, ಅದರಲ್ಲಿ 10,000 ಹೆಕ್ಟೇರ್ ಅಲ್ಫಾನ್ಸೋ ಬೆಳೆದಿದ್ದಾರೆ. ಪ್ರತಿವರ್ಷ 1 ಲಕ್ಷ ಮೆ. ಟನ್ ಮಾವು ಉತ್ಪಾದನೆಯಾಗುವ ನಿರೀಕ್ಷೆ ಇರುತ್ತದೆ. ಆದರೆ ಹೀಚು ಬಿಡುವ ಸಂದರ್ಭದಲ್ಲಿ ಅಕಾಲಿಕ ಮಳೆಯಾಗಿರುವುದು ಶೇ.25 ಫಸಲು ಕೈಸೇರುವ ನಿರೀಕ್ಷೆ ಇದೆ. ತೋಟದ ನಿರ್ವಹಣೆ, ಕೀಟನಾಶಕ, ಗೊಬ್ಬರ ಹಾಕಿದರೂ ಆರ್ಥದಷ್ಟು ಇಳುವರಿ ಬರುವುದೂ ಕಷ್ಟ ಎನ್ನುತ್ತಾರೆ ಮಾವು ಬೆಳೆಗಾರ ಶಾಂತಯ್ಯ ಹಿರೇಮಠ.

ಧಾರವಾಡ

ಕಾಯಿ ಕಚ್ಚದೆ ನಷ್ಟದ ಭೀತಿ!

ಕರ್ನಾಟಕದಲ್ಲಿ ಮಾವು ಉತ್ಪಾದನೆ ಮಾಡುವ ಜಿಲ್ಲೆಗಳಲ್ಲಿ ಕೋಲಾರ ಅಗ್ರ ಸ್ಥಾನದಲ್ಲಿದೆ. ಜಿಲ್ಲೆಯಲ್ಲಿ ಒಟ್ಟು 48 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ತಳಿಗಳ ಮಾವು ಬೆಳೆಯಲಾಗುತ್ತಿದೆ. ಕಳೆದ ವರ್ಷ ಕರೊನಾ ಹಾಗೂ ಇನ್ನಿತರ ಕಾರಣಗಳ ನಡುವೆಯೂ ಶೇ.40 ಮಾವು ಉತ್ಪಾದನೆ ಆಗಿತ್ತು. ರೈತರಿಗೆ ಆಷ್ಟೇನು ಹೊರೆ ಆಗಿರಲಿಲ್ಲ. ಈ ಬಾರಿ ಬಹುತೇಕ ಕಡೆ ಹವಾಮಾನ ವೈಪರೀತ್ಯದಿಂದ ತೇವಾಂಶ ಹೆಚ್ಚಾಗಿರುವುದರಿಂದ ಹೂವು ಅಧಿಕವಾಗಿದ್ದು, ಕಾಯಿ ಕಚ್ಚದಿರುವುದರಿಂದ ಉತ್ಪಾದನೆ ಕಡಿಮೆಯಾಗುವ ಆತಂಕ ಎದುರಾಗಿದೆ. ಜಿಲ್ಲೆಯಲ್ಲಿ ಮಲ್ಲಿಕಾ, ರಾಜಗಿರಿ, ಬದಾಮಿ, ರಸಪುರಿ ಅತ್ಯಂತ ಕಡಿಮೆ ಉತ್ಪಾದನೆ ಆಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಶ್ರೀನಿವಾಸಪುರ ಮಾವು ಬೆಳೆಗಾರ ನೀಲಟೂರು ಚಿನ್ನಪ್ಪ ರೆಡ್ಡಿ ತಿಳಿಸಿದ್ದಾರೆ. ಶೇ.10 ಇಳುವರಿ ಸಿಗುವುದೂ ಅನುಮಾನ ಎಂದು ರೈತರು ಆತಂಕ ವ್ಯಕ್ತಪಡಿಸಿದ್ದಾರೆ. ಶ್ರೀನಿವಾಸಪುರ ತಾಲೂಕು ಒಂದರಲ್ಲೇ 22 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತದೆ.

ಕೋಲಾರ



ಅಕಾಲಿಕ ಮಳೆ ಕಂಟಕ

ತುಮಕೂರು ಜಿಲ್ಲೆಯ 16,330 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. ವಾತಾವರಣದಲ್ಲಿನ ಬದಲಾವಣೆ, ಅಕಾಲಿಕ ಮಳೆ ಮತ್ತಿತರ ಕಾರಣಗಳಿಂದ ಇಳುವರಿ ಕುಂಠಿತವಾಗುವ ಆಪಾಯ ಎದುರಾಗಿದೆ. ಪ್ರಾರಂಭದಲ್ಲೇ ಹೂವು ಉದುರಿದ್ದು ವಾರ್ಷಿಕ ಇಳುವರಿ 1.20 ಲಕ್ಷ ಮೆಟ್ರಿಕ್ ಟನ್‌ಗಳಿಗೆ ಇಳಿಕೆಯಾಗುವ ನಿರೀಕ್ಷೆಯಿದೆ. ಮಾವು ಬೆಳೆಗಾರರು ಲಾಭ ಮಾಡಿಕೊಂಡಿದ್ದು ಕಡಿಮೆ. ಮಧ್ಯವರ್ತಿಗಳ ಹಾವಳಿ ರೈತರಿಗೆ ಉತ್ತಮ ಬೆಲೆ ಸಿಗದಂತೆ ಮಾಡಿದೆ. ಇದರಿಂದ ಬೇಸತ್ತ ರೈತರು ಇತ್ತೀಚಿನ ದಿನದಲ್ಲಿ ಮಾವು ತೆಗೆದು ಅಡಕೆ ಸಸಿ ನೆಡುವ ಸಂಖ್ಯೆ ಹೆಚ್ಚಾಗುತ್ತಿದೆ. ಜಿಲ್ಲೆಯಲ್ಲಿ ಹೆಚ್ಚಾಗಿ ಸಿಗುವ, ಬೇಡಿಕೆ ಹೆಚ್ಚು ಇರುವ ಬಾದಾಮಿ, ರಸಪುರಿ, ಸೇಂದೂರ, ಮಲಗೋವಾ, ಬಗನ್‌ಪಲ್ಲಿ (ಬೀನಿಸ್), ತೋತಾಪುರಿ, ರಸಪುರಿ, ಸಕ್ಕರೆಗುತ್ತಿ, ಮಲ್ಲಿಕಾ ತಳಿಯ ಮಾವು ಇಳುವರಿ ಕಡಿಮೆಯಾಗಿದೆ. ಗುಬ್ಬಿ ಭಾಗದಲ್ಲಿ ಮಾವು ಹೆಚ್ಚು ಬೆಳೆಯಲಾಗುತ್ತಿದ್ದು, ಶಾಶ್ವತ ಬರಪೀಡಿತವಾದ ಶಿರಾ, ಪಾವಗಡ ಭಾಗದಲ್ಲೂ ಬೆಳೆಯಿದೆ.

ತುಮಕೂರು

ರಾಜ್ಯದಲ್ಲಿ ಶೇ. 40 ಇಳುವರಿ ಕುಸಿತ

ರಾಜ್ಯದಲ್ಲಿ ಈ ಬಾರಿ ಶೇ.40 ಮಾವಿನ ಇಳುವರಿ ಕಡಿಮೆಯಾಗುವ ಸಾಧ್ಯತೆ ಇದೆ. 1.6 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತದೆ. ಪ್ರತಿ ವರ್ಷ 12ರಿಂದ 14 ಲಕ್ಷ ಮೆಟ್ರಿಕ್ ಟನ್ ಇಳುವರಿ ಬರುತ್ತದೆ. ಆದರೆ ಈ ಬಾರಿ 8 ಲಕ್ಷ ಮೆಟ್ರಿಕ್ ಟನ್ ಇಳುವರಿ ಮಾತ್ರ ನಿರೀಕ್ಷಿಸಲಾಗುತ್ತಿದೆ. ಒಟ್ಟು ಇಳುವರಿಯಲ್ಲಿ ಶೇ.40 ಹೊರ ರಾಜ್ಯ, ರಾಷ್ಟ್ರಗಳಿಗೆ ರಫ್ತಾಗುತ್ತದೆ. ಮಾವು ಬೆಳೆಯಲ್ಲಿ ದೇಶದಲ್ಲೇ ಕರ್ನಾಟಕಕ್ಕೆ ಮೂರನೇ ಸ್ಥಾನವಿದೆ. ಉತ್ತರ ಪ್ರದೇಶ ಅತಿ ಹೆಚ್ಚು ಬೆಳೆದರೆ, ಆಂಧ್ರಕ್ಕೆ ಎರಡನೇ ಸ್ಥಾನ. ಮಹಾರಾಷ್ಟ್ರ ನಾಲ್ಕನೇ ಸ್ಥಾನದಲ್ಲಿದೆ. ಪ್ರತಿ ವರ್ಷ ರಾಜ್ಯದಲ್ಲಿ ಬೆಳೆಯುವ ಶೇ.5ರಷ್ಟು ಹಣ್ಣಿನಿಂದ ಪಲ್ಪ್ ಕೂಡ ತಯಾರಿಸಲಾಗುತ್ತದೆ. ಎರಡು ವರ್ಷಗಳವರೆಗೆ ತಾಳಿಕೆ ಬರುವ ಇದಕ್ಕೆ ಗಲ್ಫ್ ನೇರಿ ಅಂದಾಜು 15 ರಾಷ್ಟ್ರಗಳಲ್ಲಿ ಬೇಡಿಕೆಯಿದೆ. ಈ ಬಾರಿ ಪಲ್ಪ್ ತಯಾರಿಕೆ ಮೇಲೂ ವ್ಯತಿರಿಕ್ತ ಪರಿಣಾಮ ಬೀರಲಿದೆ.

ಜಿಗಿ ಹುಳ ಕಾಟ

ರಾಮನಗರ

ರಾಜ್ಯದಲ್ಲೇ ಮೊದಲು ಮಾವು ಮಾರುಕಟ್ಟೆಗೆ ಬರುವುದು ರಾಮನಗರ ಜಿಲ್ಲೆಯಿಂದ. 30 ಸಾವಿರ ಹೆಕ್ಟೇರ್‌ನಲ್ಲಿ ಮಾವು ಬೆಳೆಯಲಾಗಿದೆ. ಈ ವರ್ಷ ಶೇ.8590 ಮರಗಳಲ್ಲಿ ಹೂವು ಕಾಣಿಸಿಕೊಂಡಿದ್ದು, ಉತ್ತಮ ಫಸಲಿನ ನಿರೀಕ್ಷೆ ಹುಟ್ಟಿಸಿತ್ತು. ಚಿಗುರು ಎರಡು ಬಾರಿ ಬಂದ ಕಾರಣದಿಂದ ಜಿಗಿ ಹುಳದ ಕಾಟ ವ್ಯಾಪಿಸಿತು. ಬಿಸಿಲ ಝಳವೂ ಹೆಚ್ಚಾಗಿ, ಹೂವೆಲ್ಲ ಉದುರಿದೆ. ಬಾದಾಮಿ ಹೊರತುಪಡಿಸಿ ಉಳಿದ ತಳಿಯ ಮಾವಿಗೆ ಹೆಚ್ಚು ಹಾನಿಯಾಗಿದೆ. ವಾರ್ಷಿಕವಾಗಿ ಜಿಲ್ಲೆಯಿಂದ ಸರಾಸರಿ 2 ಲಕ್ಷ ಟನ್ ಮಾವು ಇಳುವರಿ ದೊರೆಯುತ್ತಿತ್ತು, ಈ ಬಾರಿ ಇದರ ಪ್ರಮಾಣ ಸಂಪೂರ್ಣ ಕುಸಿಯಲಿದೆ.

ವರ್ಷದಿಂದ ವರ್ಷಕ್ಕೆ ಇಳುವರಿ ಕುಸಿತ ಸಹಜ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಮಾವಿನ ಇಳುವರಿ ಶೇ.30 ಕುಸಿತ ಕಾಣಲಿದೆ. 7586 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆದಿದ್ದು, 1 ಹೆಕ್ಟೇರ್‌ಗೆ 20ರಿಂದ 25 ಸಾವಿರ ಮೆಟ್ರಿಕ್ ಟನ್ ಇಳುವರಿ ನಿರೀಕ್ಷೆ ಇದೆ.

ಬೆಂ.ಗ್ರಾಮಾಂತರ

ಸಾಮಾನ್ಯವಾಗಿ ಹೂವು ಕಚ್ಚುವ ವೇಳೆ ತಾಪಮಾನ ಇರಬೇಕು. ಹವಾಮಾನ ವೈಪರೀತ್ಯದಿಂದಾಗಿ ಫಸಲು ನೆಲಕಚ್ಚಿದೆ ಎಂದು ಜಿಲ್ಲಾ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಗುಣವಂತ ತಿಳಿಸಿದ್ದಾರೆ. ಸಾಮಾನ್ಯವಾಗಿ ಮಾವಿನ ಫಸಲು ಪ್ರತಿ ವರ್ಷ ಒಂದೇ ತೆರನಾಗಿರುವುದಿಲ್ಲ. ಒಮ್ಮೆ ಉತ್ತಮ ಫಸಲು ಬಂದರೆ ಮುಂದಿನ ವರ್ಷ ಸಹಜವಾಗಿ ಇಳುವರಿ ಕಡಿಮೆಯಾಗುತ್ತದೆ ಎನ್ನಲಾಗಿದೆ.

For more information visit
University Library Website
Web - uasbagrilibindia.org
E-mail- librarian@uasbangalore.edu.in

ವಿ ರೈತ ಮಿತ್ರ



● **ನುಗ್ಗೆಯಲ್ಲಿ ಗಿಡಗಳಿಗೆ ಆಕಾರ ನೀಡುವುದು, ಚಾಟನಿ ಮಾಡುವ ಮೂಲಕ ಇಳುವರಿ ಹೆಚ್ಚಳ ಬಗ್ಗೆ ತಿಳಿಸಿ.**

। ಮಾಧವರಾಜ್, ಹಿರಿಯೂರು

ನುಗ್ಗೆ ಸಸಿಗಳನ್ನು ನಾಟಿ ಮಾಡಿದ 60-70 ದಿನಗಳ ನಂತರ ಮುಖ್ಯ ಸುಳಿಯನ್ನು ಚಿವುಟಿ ಹಾಕಿದರೆ ಗಿಡದ ಪಕ್ಕದಲ್ಲಿ ಕವಲುಗಳೊಡೆಯುತ್ತವೆ. ನಂತರ 30-40 ದಿನಗಳಲ್ಲಿ ಕವಲುಗಳ ಸುಳಿಯನ್ನು 25-30 ಸೆಂ.ಮೀ. ಎತ್ತರಕ್ಕೆ (ಮುಖ್ಯ ಕಾಂಡದಿಂದ) ಚಿವುಟುವುದರಿಂದ ಹೆಚ್ಚು ಕವಲುಗಳೊಡೆದು ಇಳುವರಿ ಹೆಚ್ಚಾಗುವುದಲ್ಲದೆ, ಗಿಡದ ಎತ್ತರ ಕಡಿಮೆಯಾಗಿ ಕಾಯಿಗಳನ್ನು ಕೀಳಲು ಅನುಕೂಲವಾಗುತ್ತದೆ.

ಚಾಟನಿ: ಪ್ರತಿ ವರ್ಷ ಕಾಯಿ ಕೀಳುವುದು ಮುಗಿದ ನಂತರ ಗಿಡಗಳನ್ನು ನೆಲದಿಂದ ಒಂದು ಅಡಿ ಮೇಲೆ ಪೂರ್ತಿಯಾಗಿ ಕತ್ತರಿಸಿ ಹಾಕಬೇಕು. ಕತ್ತರಿಸಿದ ಮೇಲೆ ಗಿಡಗಳಿಗೆ ಒಂದೆರಡು ತಿಂಗಳು ವಿಶ್ರಾಂತಿ ನೀಡಬೇಕು. ಇದಾದ ನಂತರ ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡಿ ಶಿಫಾರಸು ಮಾಡಿರುವ ತಿಪ್ಪೆಗೊಬ್ಬರವನ್ನು ಕೊಟ್ಟು ಆಗಾಗ ನೀರು ಹಾಯಿಸಬೇಕು. ಹೀಗೆ ಮಾಡಿದ 15-20 ದಿನಗಳಲ್ಲಿ ಕತ್ತರಿಸಿದ ಗಿಡಗಳು ಚಿಗುರೊಡೆದು ಬೆಳೆಯಲು ಆರಂಭಿಸುತ್ತವೆ. ಅವುಗಳಲ್ಲಿ ಉತ್ತಮವಾದ 3-4 ಚಿಗುರು ಮಾತ್ರ ಉಳಿಸಿಕೊಂಡು ಬೇರೆ ಚಿಗುರುಗಳನ್ನು ತೆಗೆದು ಹಾಕಬೇಕು. ಹೀಗೆ ಉಳಿಸಿಕೊಂಡ 3-4 ಚಿಗುರುಗಳು 2ರಿಂದ ಎರಡೂವರೆ ಅಡಿ ಎತ್ತರ ಬೆಳೆದಾಗ ಅವುಗಳ ಸುಳಿಗಳನ್ನು ಚಿವುಟಿ ಹಾಕಿ, ಕವಲುಗಳು ಬೆಳೆದಾಗ, ಕವಲುಗಳ ಸುಳಿಯನ್ನು ಸಹ ಚಿವುಟಿ ನಂತರ ಗಿಡಗಳನ್ನು ಹೂ, ಕಾಯಿ ಬಿಡಲು ಬಿಡಬೇಕು.

। ಡಾ. ಶಾಲಿನಿ ಎಂ. ತೋಟಗಾರಿಕೆ ತಜ್ಞರು

● **ಮನೆ ಮಟ್ಟದಲ್ಲಿ ಬೇವಿನ ಬೀಜದ ಕಷಾಯದ ತಯಾರಿಕೆ ಮತ್ತು ಬಳಸುವ ವಿಧಾನ ತಿಳಿಸಿ.** **। ಯಶೋದಾ,** ಬೇಲೂರು ತಾಲೂಕು

ಚೆನ್ನಾಗಿ ಒಣಗಿಸಿದ ಬೀಜಗಳನ್ನು ಒರಟು ಸಿಮೆಂಟ್ ಅಥವಾ ಬಂಡೆ ಮೇಲೆ ಹಾಕಿ ಒಂದು ಮರದ ಹಲಗೆಯಿಂದ ಉಜ್ಜಿ ಬೀಜ ಮತ್ತು ಪಪ್ಪುಗಳನ್ನು ಬೇರ್ಪಡಿಸಬೇಕು. ನಂತರ ಮೊರದಿಂದ ಕೇರಿ ಸಿಪ್ಪೆಗಳನ್ನು ಹೊರತೆಗೆದು, ಪಪ್ಪುಗಳನ್ನು ಚೆನ್ನಾಗಿ ಕುಟ್ಟಿ ಅಥವಾ ಅರೆದು ನುಣ್ಣಗೆ ಪುಡಿ ಮಾಡಿಕೊಳ್ಳಬೇಕು. ನಂತರ ಒಂದು ಕಿ.ಗ್ರಾಂ. ಪುಡಿಯನ್ನು 5 ಲೀ. ಶುಭ್ರವಾದ ನೀರಿನೊಂದಿಗೆ ಕಲಸಿ ಒಂದು ರಾತ್ರಿಯಿಡಿ ಅಥವಾ 12 ಗಂಟೆಗಳ ಕಾಲ ನೆನೆಸಬೇಕು. ಮಾರನೇ ದಿನ ಕೀಟನಾಶಕ ಅಂಶಗಳು, ವಿಷಕಾರಕಗಳು ನೀರಿನಲ್ಲಿ ವಿಲೀನಗೊಂಡು ಒಂದು ಬಿಳಿ ಹಾಲಿನಂತಹ ಕಷಾಯ ತಯಾರಾಗಿರುತ್ತದೆ. ಇದನ್ನು 2 ಪದರದ ತೆಳುವಾದ ಬಟ್ಟೆ ಮೂಲಕ ಸೋಸಬೇಕು. ಉಳಿದ ಗಸಿಯನ್ನು ಒಂದೆರಡು ಬಾರಿ ಹೆಚ್ಚಿನ ನೀರಿನಲ್ಲಿ ಕಲೆಸಿ ಶೋಧಿಸಿಕೊಳ್ಳಬೇಕು. ಈ ರೀತಿ ಸೋಸಿಕೊಂಡ ದ್ರಾವಣವನ್ನು ಇನ್ನಷ್ಟು ನೀರು ಬೆರೆಸಿ 20 ಲೀ. ಪ್ರಮಾಣಕ್ಕೆ ತಂದರೆ ಶೇ.5ರ ಕಷಾಯವಾಗುತ್ತದೆ. ನಂತರ ಪ್ರತಿ ಲೀ. ಕಷಾಯಕ್ಕೆ 1 ಮಿ.ಲೀ. ನಂತೆ ಒಟ್ಟು 20 ಮಿ.ಲೀ. ಮಾರ್ಜಕ ರಹಿತ ಸೋಪಿನ ದ್ರಾವಕವನ್ನು ಸೇರಿಸಿ ಮತ್ತೊಮ್ಮೆ ಚೆನ್ನಾಗಿ ಕಲಕಬೇಕು. ಈಗ ಶೇ.5 ಬೇವಿನ ಬೀಜದ ಕಷಾಯ ಸಿಂಪಡಣೆಗೆ ತಯಾರಾಗಿದೆ. ಈ ಕಷಾಯವನ್ನು ತಯಾರು ಮಾಡಿದ 24 ಗಂಟೆಯ ಅವಧಿಯೊಳಗೆ ಬಳಸಬೇಕು.

। ಪ್ರಿಯಾಂಕ ಬಿ. ಸಸ್ಯರೋಗ ತಜ್ಞರು

● **ಹೊಲ-ಮನೆಗಳಲ್ಲಿ ಇಲಿ ಮತ್ತು ಹೆಗ್ಗಣಗಳ ನಿಯಂತ್ರಣ ಹೇಗೆ?**

। ನಾಗರಾಜಯ್ಯ, ಹೊಸಹಳ್ಳಿ, ಹಾವೇರಿ ತಾಲೂಕು

ಇಲಿ, ಹೆಗ್ಗಣಗಳಿಂದ ಸುಮಾರು ಶೇ.5ರಿಂದ 15 ಆಹಾರ ಧಾನ್ಯ ನಷ್ಟವಾಗುತ್ತದೆ.

ನಿಯಂತ್ರಣ: ಶೇ.2 ಜಿಂಕ್ ಫಾಸ್ಫೈಡ್ ಅಥವಾ ಶೇ.2 ಬ್ರೊಮೋಡಿಯೋಲಾನ್ ಇಲಿ ಪಾಷಾಣವನ್ನು ಮಿಶ್ರಣ ಮಾಡಿದ ವಿಷಪೂರಿತ ಆಹಾರವನ್ನು ಉಪಯೋಗಿಸುವುದರಿಂದ ಹೊಲ-ಗದ್ದೆಗಳಲ್ಲಿ ಇಲಿಗಳನ್ನು ನಿಯಂತ್ರಿಸಬಹುದು. ತೆಂಗಿನ ಮರದಲ್ಲಿ ಇಲಿಗಳನ್ನು ನಿಯಂತ್ರಿಸಲು 1.5 ಅಡಿ ಅಗಲದ ತೆಳುವಾದ ಮತ್ತು ನುಣುಪಾದ ಟಿನ್ ಶೀಟ್/ಪಾಲಿಥಿನ್ ಹಾಳೆಯನ್ನು 10 ಅಡಿ ಎತ್ತರದಲ್ಲಿ ಕಾಂಡದ ಸುತ್ತಲೂ ಸುತ್ತಿ. 0.5 ಇಂಚಿನ ಮೊಳೆ ಹೊಡೆದು ಇಲಿಗಳು ಮರ ಏರಲು ತಡೆ ಮಾಡಿದ್ದಲ್ಲಿ ಇವುಗಳ ಕಾಟವನ್ನು ಬಹುತೇಕ ನಿಯಂತ್ರಿಸಬಹುದು. ಬೆಕ್ಕುಗಳನ್ನು ಸಾಕುವುದರಿಂದ, ಇಲಿಗಳು ಸಂಚರಿಸುವ ದಾರಿಗಳಲ್ಲಿ ಬೋನುಗಳನ್ನು ಅಥವಾ ಅಂಟುಬೋನುಗಳನ್ನು ಇಟ್ಟು ಅವುಗಳಲ್ಲಿ ಇಲಿಗಳು ಸಿಕ್ಕಿಕೊಂಡಾಗ ಹಿಡಿದು ನಾಶಪಡಿಸುವುದರಿಂದ ಮನೆ/ಉಗ್ರಾಣ/ಕೋಳಿ ಫಾರಂಗಳಲ್ಲಿ ಇಲಿ ಅಥವಾ ಹೆಗ್ಗಣಗಳನ್ನು ನಿಯಂತ್ರಿಸಬಹುದು.

। ಹರ್ಷಕುಮಾರ್ ಎಸ್.ಎಸ್. ಬೇಸಾಯ ತಜ್ಞರು

ಜುಲೈನಿಂದ ನಾಲ್ಕು ಕಡೆ ಸಿರಿಧಾನ್ಯ ಮೇಳ

ಚಿತ್ರದುರ್ಗ: ಜುಲೈನಿಂದ ರಾಜ್ಯದ ನಾಲ್ಕು ಕಡೆಗಳಲ್ಲಿ ಸಿರಿಧಾನ್ಯ ಮೇಳಗಳನ್ನು ಆಯೋಜಿಸಲಾಗುತ್ತಿದ್ದು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಬೆಂಗಳೂರು, ಬೆಳಗಾವಿ, ಕಲಬುರಗಿ, ಚಿತ್ರದುರ್ಗ ಅಥವಾ ದಾವಣಗೆರೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡುವ ಯೋಜನೆ ದೇಶದಲ್ಲೇ ಕರ್ನಾಟಕ ಪ್ರಥಮವಾಗಿದ್ದು, ಮುಖ್ಯಮಂತ್ರಿ ವಿದ್ಯಾನಿಧಿ ಯೋಜನೆಯಡಿ ರಾಜ್ಯದಲ್ಲಿ 7 ಲಕ್ಷ ಮಕ್ಕಳಿಗೆ ಹಣ ಜಮೆಯಾಗಿರುವುದು ಇತಿಹಾಸ. ವಿದ್ಯಾರ್ಥಿಗಳ ಶಿಷ್ಯವೇತನಕ್ಕಾಗಿ ಪ್ರಸಕ್ತ ವರ್ಷದ ಬಜೆಟ್‌ನಲ್ಲಿ ₹ 200 ಕೋಟಿ ರುಪಾಯಿ ಮೀಸಲಿಡಲಾಗಿದೆ ಎಂದು ಹೇಳಿದರು.



28-02-2022 Vsv Pg 05

28-02-2022 Vv Pg 7B

28-02-2022 Times of Ind Pg 04

NOW, BHINDI CAN REMOVE MICROPLASTICS FROM WATER



Okra and other slimy veggies may be able to remove microplastics from wastewater, new study finds. The research offers an alternative to the chemical treatment currently being used, Euro News reports. Ingested microplastics — which are five millimetre or smaller — harm aquatic life in many ways. Lead investigator Rajani Srinivasan found that chains of carbohydrates from okra and fenugreek worked best to remove microplastics from ocean water

ಅಣಬೆ ಮೌಲ್ಯವರ್ಧನೆ, ಆದಾಯ ಬಲವರ್ಧನೆ!



ಸಿಇಒ, ಸಂಸ್ಥಾಪಕರು ಇಂಡಿಯನ್‌ಮನಿ.ಕಾಂ
ವೆಬ್‌ಸೈಟ್: www.indianmoney.com

ಒಂದು ರೂಪಾಯಿ ಆದಾಯ 5-10 ರೂಪಾಯಿ ಆಗಬೇಕು ಅಂದ್ರೆ ಮೌಲ್ಯವರ್ಧನೆ ಉತ್ತಮ ಮಾರ್ಗ. ಯಾವುದೇ ಕೃಷಿ ಉತ್ಪನ್ನವಿರಲಿ ಮೌಲ್ಯವರ್ಧನೆ ಮಾಡಿದ್ದಲ್ಲಿ ಆದಾಯ ದುಪ್ಪಟ್ಟಾಗುತ್ತದೆ. ಅಣಬೆ ಕೃಷಿಯೂ ಇದಕ್ಕೆ ಹೊರತಾಗಿಲ್ಲ. ಆದರೆ ಅಣಬೆ ಮಾತ್ರ ಅನ್ಯ ಬೆಳೆಗಿಂತ ವಿಶೇಷ. ಬೆಳೆದ ಅಣಬೆಯನ್ನು ರೈತ ಮಾರಾಟ ಮಾಡಬೇಕು, ಇಲ್ಲವಾದರೆ ಮೌಲ್ಯವರ್ಧನೆ ಮಾಡಬೇಕು. ಎರಡರಲ್ಲಿ ಒಂದಾದರೂ ಮಾಡಲಿಲ್ಲ ಅಂತಾದರೆ ಬೆಳೆಯೂ ಸಿಗಲ್ಲ, ಬೆಲೆಯೂ ಸಿಗಲ್ಲ. ಅಣಬೆ, ತಾಜಾ ಮತ್ತು ಒಣ ಎರಡರಲ್ಲೂ ಆದಾಯ ತರುತ್ತದೆ. ಉದಾಹರಣೆಗೆ ಆಯಿಸ್ಟರ್ ಅಥವಾ ಸಿಂಪಿ ಅಣಬೆಗೆ ರಿಟೇಲ್ ಮಾರುಕಟ್ಟೆಯಲ್ಲಿ ಕೆಜಿಗೆ 250 ರೂ. ಸಿಗುತ್ತೆ. ಅದೇ ಮೌಲ್ಯವರ್ಧನೆ ಮಾಡಿ ಉಪ್ಪಿನಕಾಯಿ ಮಾಡಿದ್ದೀರಿ ಅಂದಿಟ್ಟುಕೊಳ್ಳೋಣ 100 ಗ್ರಾಂ ಉಪ್ಪಿನಕಾಯಿಗೆ 100 ರೂ. ಸಿಗುತ್ತದೆ. ಒಂದು ಕೆಜಿ ಉಪ್ಪಿನಕಾಯಿಗೆ ಸಾವಿರ ರೂಪಾಯಿ ದೊರಕುತ್ತದೆ. ಅಂದ್ರೆ ಹಸಿಯಲ್ಲಿ 250 ರೂ. ಪಡೆದರೆ ಮೌಲ್ಯವರ್ಧನೆಯಲ್ಲಿ 4 ಪಟ್ಟು ಹೆಚ್ಚಾಗುತ್ತದೆ. ಅದರಲ್ಲಿ ಅರ್ಧದಷ್ಟು ಖರ್ಚು ತೆಗೆದರೂ 500 ರೂ. ನಿವ್ವಳ ಲಾಭ ಪಡೆದುಕೊಳ್ಳಬಹುದು. ಜತೆಗೆ ಹಸಿ ಅಣಬೆಯಂತೆ ಮೂರೇ ದಿನಕ್ಕೆ ಮಾರಬೇಕು ಅಂತಿರದೆ ವರ್ಷಪೂರ್ತಿ ಇಟ್ಟುಕೊಂಡು ದರ ಕುದುರುವವರೆಗೆ ಧೈರ್ಯವಾಗಿ ಮಾರಾಟ ಮಾಡಬಹುದು. ರಿಟೇಲ್ ಮಾರುಕಟ್ಟೆಯಲ್ಲಿ 250 ರೂ.ಗೆ ಅಣಬೆ ಮಾರಿದ್ರೆ 50 ರೂ. ಖರ್ಚು ತೆಗೆದು 200 ರೂ. ಲಾಭ ಪಡೆಯುತ್ತೀರಿ. ಅದೇ ಹೋಲ್‌ಸೇಲ್ ಮಾರುಕಟ್ಟೆಯಲ್ಲಿ 150 ರೂ.ಗೆ ನೀಡಿದ್ರೆ 50 ರೂ. ಖರ್ಚು ತೆಗೆದರೆ 100 ರೂ. ಲಾಭ ಪಡೆಯುತ್ತೀರಿ. ಅದೇ ಮೌಲ್ಯವರ್ಧನೆ ಮಾಡಿ 1000 ರೂ.ಗೆ ಮಾರಿದರೆ ಖರ್ಚು ಕಳೆದು 500 ರೂ. ಆದಾಯ ಖಂಡಿತಾ ಪಡೆದುಕೊಳ್ಳಬಹುದು. ಜತೆಗೆ ನಿಮ್ಮದೇ ಒಂದು ಬ್ರ್ಯಾಂಡ್ ಕಟ್ಟಿ ಯಶಸ್ವಿ ಉದ್ಯಮಿಯಾಗಬಹುದು. ಎಲ್ಲಕ್ಕಿಂತ ಹೆಚ್ಚಾಗಿ ನಾಲ್ಕು ಜನಕ್ಕೆ ಕೆಲಸ ನೀಡಬಹುದು. ನಿಮ್ಮ ಕ್ರಿಯೇಟಿವಿಟಿಯಲ್ಲಿ ದೇಶದ ಜಿಡಿಪಿಗೆ ಒಂದು ಕೊಡುಗೆ ನೀಡಬಹುದು.

ಅಣಬೆ ಉತ್ಪನ್ನಗಳು: ಹಸಿ ಅಣಬೆಯಲ್ಲಿ ಸಾರು, ಪಲ್ಯ, ಬಿರಿಯಾನಿ ತಯಾರಿಸುತ್ತೇವೆ. ಅದೇ ರೀತಿ ಒಣ ಅಣಬೆಯಲ್ಲಿ ಹತ್ತಾರು ಉತ್ಪನ್ನಗಳನ್ನು ತಯಾರು ಮಾಡಬಹುದು. ಉಪ್ಪಿನಕಾಯಿ, ಚಿಪ್ಸ್, ಕುಕೀಸ್, ಪೌಡರ್, ವೇಪರ್ಸ್, ಕ್ಯಾಂಡಿ, ಹಪ್ಪಳ ಹೀಗೆ ಮಕ್ಕಳಿಂದ ಹಿಡಿದು ಹಿರಿಯರವರೆಗೆ ಪ್ರತಿಯೊಬ್ಬರಿಗೂ ಇಷ್ಟವಾಗುವ ಉತ್ಪನ್ನಗಳನ್ನು ತಯಾರಿಸಬಹುದು. ಅವರವರ ಬುದ್ಧಿವಂತಿಕೆ ಮೇಲೆ ಉತ್ಪನ್ನಗಳ ಜತೆ ಕಾನ್ಸೆಪ್ಟ್ ಸೇರಿಕೊಂಡು ಗ್ರಾಹಕರನ್ನು ಆಕರ್ಷಿಸುತ್ತದೆ.

ಆರೋಗ್ಯಕ್ಕೆ ಅಣಬೆ ಹೇಗೆ ಸಹಕಾರಿ?: ಅಣಬೆ ಪೋಷಕಾಂಶಗಳ ಆಗರ. ಇದು ಹೃದಯಕ್ಕೆ ಮತ್ತು ದೇಹದ ಪ್ರತಿರಕ್ಷಣಾ ವ್ಯವಸ್ಥೆಯನ್ನು ಉತ್ತಮವಾಗಿರಿಸುತ್ತದೆ. ಮಧುಮೇಹ ಮತ್ತು ರಕ್ತದೊತ್ತಡ ನಿಯಂತ್ರಣದಲ್ಲಿರಿಸುತ್ತದೆ. ಆಯಿಸ್ಟರ್ ಅಣಬೆಯಲ್ಲಿ ಇಷ್ಟೆಲ್ಲ ಗುಣಗಳಿದ್ದರೆ ಮಿಕ್ಕಂತೆ ಶಿಥಾಕಿ ಅಣಬೆಗಳು ಕ್ಯಾನ್ಸರ್ ಹತೋಟಿಗೆ ಸಹಕಾರಿಯಾಗಿದೆ. ಬಟನ್ ಮತ್ತು ಮಿಲ್ಕಿ ಅಣಬೆ ಸೇರಿ ಒಂದೊಂದು ಜಾತಿಯ ಅಣಬೆಯು ಒಂದೊಂದು ಅದ್ಭುತ ಶಕ್ತಿ ಪಡೆದುಕೊಂಡು ಅದರದ್ದೇ ಆದ ದೊಡ್ಡ ಮಾರುಕಟ್ಟೆ ಸೃಷ್ಟಿಸಿಕೊಂಡಿದೆ.

ಅಣಬೆಯಲ್ಲಿ ಉದ್ಯಮದ ಅವಕಾಶ: ಪ್ರಪಂಚದ ಅಣಬೆ ಮಾರುಕಟ್ಟೆಯಲ್ಲಿ ಚೀನಾ ಅತಿ ಹೆಚ್ಚು ಅಣಬೆ ಉತ್ಪಾದಿಸುವ ರಾಷ್ಟ್ರ ಎಂದು ಗುರುತಿಸಿಕೊಂಡಿದೆ. 2019ರ ಸರ್ವೇ ಪ್ರಕಾರ, ಭಾರತ 19ನೇ ಸ್ಥಾನದಲ್ಲಿತ್ತು. ಅಂದರೆ ಭಾರತದಲ್ಲಿ ಅಣಬೆ ಬೇಸಾಯ ಮತ್ತು ಮೌಲ್ಯವರ್ಧನೆ ಉದ್ಯಮಕ್ಕೆ ಬಹುದೊಡ್ಡ ಅವಕಾಶವಿದೆ. ಉತ್ತರ ಪ್ರದೇಶ ಮತ್ತು ಪಂಜಾಬ್ ಹೆಚ್ಚು ಅಣಬೆ ಬೆಳೆಯುವ ರಾಜ್ಯಗಳೆಂದು ಗುರುತಿಸಿಕೊಂಡಿವೆ. ಕರ್ನಾಟಕ, ಕೇರಳ, ಹರ್ಯಾಣ, ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ಹಿಮಾಚಲ ಪ್ರದೇಶ ಹೆಚ್ಚು ಅಣಬೆ ಬೆಳೆಯುವ ರಾಜ್ಯಗಳಾಗಿವೆ. ದಕ್ಷಿಣ ಭಾರತಕ್ಕೆ ಹೋಲಿಸಿದರೆ ಉತ್ತರಭಾರತದಲ್ಲಿ ಬೆಳೆ ಮತ್ತು ಬೇಡಿಕೆ ಎರಡೂ ಹೆಚ್ಚಾಗಿಯೇ ಇವೆ. ಭಾರತದ ಜನಸಂಖ್ಯೆ ಪರಿಗಣಿಸಿದರೆ ಇಲ್ಲಿ ಬೆಳೆಯುತ್ತಿರುವ ಅಣಬೆ ದೇಶದೊಳಗೆ ಪೂರೈಸಲಾಗೋದಿಲ್ಲ. ಹೀಗಾಗಿ ಬರೀ 10 ಸಾವಿರ ರೂ. ಬಂಡವಾಳ ಇದ್ದರು ಕೂಡ ಆಕಾಂಕ್ಷಿಗಳು ದೊಡ್ಡ ಉದ್ಯಮ ಕಟ್ಟಲು ಮುಕ್ತ ಅವಕಾಶವಿದೆ.

ಅನುಸರಿಸಬೇಕಾದ ನೀತಿ ನಿಯಮ: ಅಣಬೆ ಬೆಳೆಯಲು ಜಾಗ್ರತೆವಹಿಸಿದರೆ ಸಾಕು. ಆದರೆ ಮೌಲ್ಯವರ್ಧನೆ ಮಾಡಲು ಮುಂದಾದರೆ ಒಂದಷ್ಟು ನಿಯಮ ಅನುಸರಿಸಲೇಬೇಕಾಗುತ್ತದೆ. ಆಹಾರೋತ್ಪನ್ನ ಆಗಿರುವುದರಿಂದ ಫುಡ್ ಲೈಸೆನ್ಸ್ ಬೇಕೇಬೇಕು. ಬ್ರ್ಯಾಂಡ್ ನೇಮ್ ಅತ್ಯಗತ್ಯ. ಜಿಎಸ್‌ಟಿ ನೋಂದಣಿ ಮಾಡಿಸಬೇಕು. ಲ್ಯಾಬ್ ಟೆಸ್ಟ್ ಹೀಗೆ ಒಂದಷ್ಟು ನಿಯಮ ಪಾಲಿಸಲೇಬೇಕು.



ಫೈನಾನ್ಷಿಯಲ್ ಫ್ರೀಡಂ ಆ್ಯಪ್‌ನಲ್ಲಿ ಅಣಬೆ ಮೌಲ್ಯವರ್ಧನೆ ಕೋರ್ಸ್

ಅಣಬೆ ಕೃಷಿ ಉದ್ಯಮ ಮಾಡಬೇಕು ಅಂತ ಬಯಸುವವರಿಗಾಗಿ ಫೈನಾನ್ಷಿಯಲ್ ಫ್ರೀಡಂ ಆ್ಯಪ್ ಎರಡು ರೂಪದ ಕೋರ್ಸ್ ಅನಾವರಣಗೊಳಿಸಿದೆ. ಅಣಬೆ ಕೃಷಿ ಮಾಡುವವರಿಗಾಗಿ ಅಣಬೆ ಕೃಷಿ ಕೋರ್ಸ್ ಮತ್ತು ಪ್ರಾಡಕ್ಟ್ ಮಾಡಬಯಸುವವರಿಗಾಗಿ ಅಣಬೆ ಮೌಲ್ಯವರ್ಧನೆ ಕೋರ್ಸ್ ಬಿಡುಗಡೆ ಮಾಡಿದೆ. ಖಾಸಗಿ ಕಂಪನಿ ಉದ್ಯೋಗ ತ್ಯಜಿಸಿ ತನ್ನ 24 ವರ್ಷದಲ್ಲೇ ಅಣಬೆ ಮೌಲ್ಯವರ್ಧನೆ ಉದ್ಯಮಕಟ್ಟಿ ಯಶಸ್ವಿಯಾದ ಯುವ ಉದ್ಯಮಿ ಶಿವಮೊಗ್ಗ ಜಿಲ್ಲೆಯ ಮನಸ್ವಿ ಹೆಗ್ಡೆ ಆವರೇ ಅಣಬೆ ಮೌಲ್ಯವರ್ಧನೆ ಕೋರ್ಸ್ ಮಾರ್ಗದರ್ಶಕರು.

ಕೋರ್ಸ್‌ನಲ್ಲಿ ಏನೇನಿದೆ?

- ಕೋರ್ಸ್ ಪರಿಚಯ
- ಮಾರ್ಗದರ್ಶಕರ ಪರಿಚಯ
- ಏನಿದು ಅಣಬೆ ಮೌಲ್ಯವರ್ಧನೆ ಬಿಸಿನೆಸ್?
- ಅಣಬೆ ಕುಕೀಸ್, ಅಣಬೆ ಪೌಡರ್
- ಅಣಬೆ ಉಪ್ಪಿನಕಾಯಿ, ಅಣಬೆ ವೇಪರ್ಸ್
- ಅಣಬೆ ಡ್ರೈ ಮಾಡುವ ವಿಧಾನ
- ಪರವಾನಗಿ, ನೋಂದಣಿ ಮತ್ತು ಲ್ಯಾಬ್ ಟೆಸ್ಟ್
- ಪ್ಯಾಕಿಂಗ್, ಬ್ರ್ಯಾಡಿಂಗ್ ಮತ್ತು ಟೈ ಅಪ್
- ಮಾರುಕಟ್ಟೆ, ರಫ್ತು, ಖರ್ಚು ಮತ್ತು ಲಾಭ
- ಸವಾಲು ಮತ್ತು ಕಿವಿಮಾತು

ಆನ್‌ಲೈನ್ ಮೇಕಪ್ ಆರ್ಟಿಸ್ಟ್ ಕೋರ್ಸ್‌ಗೆ ಈಗಲೇ ಸೇರಿ!

ಕನ್ನಡ ನಟಿ ಮತ್ತು ಸೆಲೆಬ್ರೆಟಿ ಮೇಕಪ್ ಆರ್ಟಿಸ್ಟ್ ವೈಭವಿ ಜಗದೀಶ್ ಅವರು ಇಂಡಿಯನ್ ಮನಿ ಫೈನಾನ್ಷಿಯಲ್ ಫ್ರೀಡಂ ಆ್ಯಪ್ ಸಹಯೋಗದಲ್ಲಿ ನಡೆಸುತ್ತಿರುವ ಆನ್‌ಲೈನ್ ಮೇಕಪ್ ಆರ್ಟಿಸ್ಟ್ ಕೋರ್ಸ್‌ಗೆ ಈಗಲೇ ಸೇರಿಕೊಳ್ಳಿ. ನೀವು ಮೇಕಪ್ ಕಲೆ ಕಲಿತು ದುಡಿಮೆಯ ದಾರಿ ಕಂಡುಕೊಳ್ಳಿ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ- 7975465873

Woes rained on state since 2018, but Centre's aid was just a trickle

Losses worth Rs 1.1 lakh cr; relief was just Rs 8,023 cr

AKRAM MOHAMMED
BENGALURU, DHNS

Floods and droughts since 2018-19 have resulted in losses to the tune of Rs 1.1 lakh crore in Karnataka.

In contrast, the relief received by the state under the National Disaster Response Fund (NDRF) during the period was a meagre Rs 5,729.06 crore. Centre's allocation under State Disaster Respond Fund (SDRF) during the same period was Rs 2,293.8 cr.

The total allocation from the Centre under NDRF and SDRF was Rs 8,023 crore - which was around 7.2% of the losses suffered. Moreover, Karnataka government had to spend Rs 4,144 crore from its own coffers to compensate for the crop losses and houses damaged due to these natural disasters.

The state government announced additional relief for damaged houses and crops as compensation under NDRF was found to be inadequate.

For instance, Karnataka government announced Rs five lakh compensation for houses completely damaged during floods, while NDRF norms provide only Rs 95,000. Similarly, the Karnataka government increased compensation for crop loss following the devastating floods of 2018 and 2019.

The data on losses and NDRF grants was recently tabled in the Legislative Council in response to a question by U B Venkatesh of the Congress.

According to the response by Revenue Minister R Ashoka, a total of 2.07 lakh families were affected in the 2019 floods (considered to be the worst flood suffered by the Krishna basin in more than a century), 36,306 families in 2020 and 85,862 families in 2021.



The total allocation from the Centre under NDRF and SDRF was Rs 8,023 crore - which was around 7.2% of the losses suffered.

What we lost?

2018-19	
August Floods Rs 4,262.09 cr	North East Monsoon drought Rs 11,384.47 cr
South West Monsoon drought Rs 16,662.48 cr	
2019-20	**2020-21**
Floods Rs 35,160.81 cr	Floods Rs 24,941.72 cr
2021-22	
Floods Rs 18,292.57 cr	Total losses Rs 1,10,704.14 cr

NDRF grants

2018 August floods	Rs 525.22 cr
2018 South West monsoon drought	Rs 949.49 cr
2018 North East monsoon drought	Rs 1,029.39 cr
2019 August floods	Rs 1,652.85 cr
2020 September - October floods	Rs 577.84 cr
2021 July floods	Rs 501.88 cr
2021 October - November floods	Rs 492.39 cr
Total	**Rs 5,729.06 cr**

SDRF grants

Year	Centre's share (Rs cr)	State's share (Rs cr)	Additional release by state (Rs cr)
2017-18	228.75	76.25	37.19
2018-19	240.00	80.0	200.00
2019-20	244.05	81.5	947.00
2020-21	790.5	263.5	492.29
2021-22	790.5	263.5	2,468.22

TOTAL ADDITIONAL FUNDS RELEASED BY STATE - RS 4,144.7 CR

28-02-2022 Dec Hrd Pg 04

28-02-2022 Uv Pg 07

ಕಮರಿದ ಮಾವು, ಬೆಳೆಗಾರರಿಗೆ ನೋವು

• ಬಸವರಾಜ ಹೊಂಗಲ್

ಧಾರವಾಡ: ಆಲ್ಫೋನ್ಸೋ ಮಾಮರಗಳು ತಪ್ಪಲು ಕಾಣದಂತೆ ಹೂ ಬಿಟ್ಟು ಎರಡು ತಿಂಗಳಾಗುವ ಮುಂಚೆಯೇ ಬೆಳೆಗಾರರಿಗೆ ಮತ್ತೊಮ್ಮೆ ಮರ್ಮಾಘಾತ ನೀಡಿದೆ. ಸುದೀರ್ಘ ಸುಗ್ಗಿ ಬೂದಿರೋಗ, ಟ್ರಿಪ್ಸ್ ನುಶಿ ಕಾಟ, ಇಬ್ಬನಿ ಮತ್ತು ಹವಾಮಾನ ವೈಪರೀತ್ಯದ ಪರಿಣಾಮ ಶೇ.78 ಮಾಮರಗಳಲ್ಲಿನ ಹೂವು, ಹೀಚು ಮಿಡಿಯಾಗುವ ಮುನ್ಸೂಚನೆ ಕಮರಿ ಬಿದ್ದಿವೆ.

ಆಲ್ಫೋನ್ಸೋ ಗಿಡಗಳು ಈ ವರ್ಷ ಫ್ಲೊರಾಂಗ್ ಫ್ಲೊಸ್ (ಸುದೀರ್ಘ ಸುಗ್ಗಿ)ಗೆ ಒಳಗಾಗಿ 2021ರ ನವೆಂಬರ್, ಡಿಸೆಂಬರ್ ತಿಂಗಳಿಗೆ ಬದಲಾಗಿ 2022ರ ಜನವರಿ ಮತ್ತು ಫೆಬ್ರವರಿಯಲ್ಲಿ ವಿಪರೀತ ಹೂ, ಹೀಚು ಹಿಡಿದಿದ್ದವು. ಇದೀಗ ಆಲ್ಫೋನ್ಸೋ ಶೇ.78 ಉತ್ಪಾದನೆ ಕುಸಿತಗೊಂಡಿದ್ದು ಹೂ ಬಿಡಿದು ಆಸೆ ಮೂಡಿಸಿದ್ದ ತೋಟಗಳಲ್ಲಿ ಹೀಚುಗಳೇ ಕಮರಿ ಹೋಗಿದ್ದು ಬೆಳೆಗಾರರು-ಮಾರಾಟಗಾರರ ಕನಸು ಕಮರಿ ಹೋದಂತಾಗಿದೆ.

ಬೂದಿರೋಗ, ಬಿಸಿಲು, ಟ್ರಿಪ್ಸ್ ಕಾಟ: ಈ ವರ್ಷದ ಫೆಬ್ರವರಿ ತಿಂಗಳಿನ ಆರಂಭದಲ್ಲಿ ತೋಟಗಳಲ್ಲಿ ಸಣ್ಣಗೆ ಕಾಣಿಸಿಕೊಂಡ ಬೂದು ರೋಗ ಮಾವಿಗೆ ಮರ್ಮಾಘಾತ ನೀಡಿದೆ. ಈ ಬೂದು ರೋಗದಿಂದ ವಿಪರೀತ ಹೂ, ಹೀಚು ಹಿಡಿದ ಮಾವು ಶೇ.40 ಉದುರಿ ಹೋಯಿತು. ಇನ್ನು ಮಾರ್ಚ್ ಆರಂಭದಲ್ಲಿ ಮಾವು ಕಾಯಿ ಕಟ್ಟಬೇಕಿತ್ತು. ಆದರೆ ವಿಪರೀತ ಬಿಸಿಲು ಮತ್ತು ಸತತ ಇಬ್ಬನಿಯಿಂದ ಶೇ.28 ಬಲಿಯಾಯಿತು. ಸೊನೆಮಡಿ ತಿನ್ನುವ ನುಶಿ ಇದೀಗ ಕಾಣಿಸಿಕೊಂಡಿದ್ದು ಟ್ರಿಪ್ಸ್ ಎಂಬ ನುಶಿಕೀಟದ ಬಾಧೆಗೆ ಮಾವಿನ ತೋಟಗಳೇ ನಲುಗಿ ಹೋಗುತ್ತಿವೆ. ಲಿಂಬೆಕಾಯಿ ಗಾತ್ರದ ಮಾವಿನ ಮಿಡಿಗಳು ಹಳದಿಯಾಗಿ ಕಮರಿ ಉದುರುತ್ತಿವೆ. ಇದಕ್ಕೆ ಶೇ.10 ಮಾವು ಬಲಿಯಾಗಿದೆ. ಒಟ್ಟಿನಲ್ಲಿ ಬೂದುರೋಗ, ಬಿಸಿಲು-ಟ್ರಿಪ್ಸ್ ಕೀಟದ ಹೊಡೆತಕ್ಕೆ ಶೇ.78 ಮಾವು ಕಮರಿ ಹೋಗಿದೆ ಎನ್ನುತ್ತಿದ್ದಾರೆ ಧಾರವಾಡದ ಮಾವು ಸಂಶೋಧನಾ ಕೇಂದ್ರದ ತಜ್ಞರು.

ಲಕ್ಷಕ್ಕೇರಲಿಲ್ಲ, ಲಕ್ಷ ರೂ. ಬರಲಿಲ್ಲ: ಜಿಲ್ಲೆಯಲ್ಲಿ ರಾಜ್ಯದಲ್ಲಿಯೇ ಅತೀ ಹೆಚ್ಚು ಆಲ್ಫೋನ್ಸೋ ಮಾವಿನ ಹಣ್ಣನ್ನು ಬೆಳೆಯಲಾಗುತ್ತದೆ. 2019ರಲ್ಲಿ 87 ಸಾವಿರ ಟನ್, 2020ರಲ್ಲಿ 93 ಸಾವಿರ ಟನ್ ಮಾವು ಜಿಲ್ಲೆಯಲ್ಲಿ ಉತ್ಪಾದನೆಯಾಗಿತ್ತು. 2022ರಲ್ಲಿ 10,762 ಹೆಕ್ಟೇರ್ ಪ್ರದೇಶದಲ್ಲಿನ ಮಾವಿನ ತೋಟಗಳು ಹೂ, ಹೀಚು ಹಿಡಿದಿರುವುದನ್ನು ನೋಡಿ ಈ ವರ್ಷ ಲಕ್ಷ ಟನ್‌ಗೂ ಅಧಿಕ ಉತ್ಪಾದನೆ ನಿರೀಕ್ಷಿಸಲಾಗಿತ್ತು. ಆದರೆ ಇಬ್ಬನಿ ಹೊಡೆತಕ್ಕೆ ಇಳುವರಿ ಕುಸಿಯುವ ಸಾಧ್ಯತೆ ಇದೆ ಎನ್ನುತ್ತಿದ್ದಾರೆ ಮಾವು ತಜ್ಞರು. ಈ ಮಧ್ಯೆ ಕಳೆದ ಒಂದು ವಾರದಿಂದ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಸುರಿದ ಆಕಾಲಿಕ ಮಳೆ ಆಲ್ಫೋನ್ಸೋ ಮಾವಿನ ಎಲೆಗಳಿಗೆ ಕರಿಕಪ್ಪು ಚುಕ್ಕು ರೋಗ ತಂದಿಟ್ಟಿದೆ. ಹೀಗಾಗಿ ಹೂವು, ಹೀಚು ಮೂಡಿದಾಗ ಮಾವು ಲಕ್ಷ ಲಕ್ಷ ಗಳಿಕೆ ಆಗಬಹುದು ಎಂದುಕೊಂಡಿದ್ದ ಮಾವು ಬೆಳೆಗಾರರಿಗೆ ಈ ವರ್ಷವೂ ನಿರಾಸೆಯಾಗಿದೆ.

30 ಕೋಟಿ ರೂ.ಗೆ ವಹಿವಾಟು ಕುಸಿತ?: 2018-19ರಲ್ಲಿ ಜಿಲ್ಲೆಯಲ್ಲಿಯೇ ಅಂದಾಜು 60 ಕೋಟಿ ರೂ. ವಹಿವಾಟು ಮಾವಿನ ಸುಗ್ಗಿಯಲ್ಲಿ ನಡೆಯುತ್ತದೆ ಎಂದು ಮಾವು ಬೆಳೆಗಾರರ ಸಂಘ ಅಂದಾಜು ಮಾಡಿತ್ತು. ಆದರೆ 2020-2021ನೇ ಸಾಲಿನಲ್ಲಿ ಕೊರೊನಾ ಮಹಾಮಾರಿ-ಲಾಕ್‌ಡೌನ್ ಪರಿಣಾಮ ವಹಿವಾಟು 40 ಕೋಟಿ ರೂ.ಗೆ ಇಳಿಕೆ ಆಗಿತ್ತೆಂದು ಅಂದಾಜಿಸಲಾಗಿತ್ತು. ಈ ವರ್ಷ ಇದು 30 ಕೋಟಿ ರೂ. ತಲುಪುವುದು ಕಷ್ಟವೇ ಎನ್ನುತ್ತಿದ್ದಾರೆ ಬೆಳೆಗಾರರು.

ಮಾವು ಹೋಗಿ ಕಬ್ಬು ಬಂತು

ಜಿಲ್ಲೆಯಲ್ಲಿ ಕಬ್ಬು ಬೆಳೆ ಇತರ ಬೆಳೆಗಳನ್ನು ಹಿಂದಿಕ್ಕಿ ಮುನ್ನಡೆದಿದ್ದು ಆಲ್ಫೋನ್ಸೋ ಮಾವಿನ ತೋಟಗಳನ್ನು ರೈತರು ಕಿತ್ತು ಹಾಕಿ ಕಬ್ಬು ನೆಡುತ್ತಿದ್ದಾರೆ. ಧಾರವಾಡ, ಕಲಘಟಗಿ ಮತ್ತು ಅಳ್ನಾವರ ಭಾಗದಲ್ಲಿ ಕಳೆದ 2 ವರ್ಷಗಳಲ್ಲಿ 900 ಎಕರೆಗೂ ಅಧಿಕ ಆಲ್ಫೋನ್ಸೋ ಮಾವಿನ ಗಿಡವನ್ನು ಕಿತ್ತು ಹಾಕಿ ಕಬ್ಬು ನೆಟ್ಟಿದ್ದಾರೆ. ಹವಾಮಾನ ವೈಪರೀತ್ಯ, ಉತ್ತಮ ಬೆಲೆ ಸಿಗದ ಪರಿಣಾಮ ಮತ್ತು ಮೌಲ್ಯವರ್ಧನೆಗೆ ಜಿಲ್ಲೆಯಲ್ಲಿ ಅವಕಾಶಗಳು ಸಿಕ್ಕದೇ ಹೋಗಿದ್ದರಿಂದ ರೈತರು ಮಾವಿನ ಮೇಲಿನ ಪ್ರೀತಿ ಕಳೆದುಕೊಳ್ಳುತ್ತಿದ್ದಾರೆ. ಕಬ್ಬಿಗೆ ಉತ್ತಮ ಬೆಲೆ ಸಿಗುತ್ತಿದ್ದು 10-15 ವರ್ಷಗಳಷ್ಟು ಹಳೆಯದಾದ ತೋಟಗಳನ್ನು ಕಿತ್ತು ಹಾಕುತ್ತಿದ್ದಾರೆ.



ಧಾರವಾಡ: ಹೂ, ಹೀಚು ಕಮರಿ ಹೋಗಿರುವುದು.

ಚಳಗಾಲದಲ್ಲಿಯೇ ಸರಿಯಾಗಿ ಹೂ ಬಿಟ್ಟಿದ್ದರೆ ಉತ್ತಮ ಬೆಳೆ ನಿರೀಕ್ಷೆ ಆಗುತ್ತಿತ್ತು. ಬೇಸಿಗೆಯ ಬಿಸಿಲಿಗೆ ಹೂ ಕಮರಿ ಹೋಯಿತು. ಬೂದು ರೋಗ ಹೆಚ್ಚಾಗಿ ಹೂವು ಕಮರಿ ಹೋಯಿತು. ಇನ್ನುಳಿದಿದ್ದು ಹೀಚು ಹಳದಿಯಾಗಿ ಉದುರುತ್ತಿದೆ. ಹೀಗಾಗಿ ಶೇ.70 ಮಾವು ಉತ್ಪಾದನೆ ಕುಸಿಯುತ್ತಿದೆ.

• ಡಾ.ಜ್ಞಾನೇಶ್ವರ ಗೋಪಾಲೆ,
ಮಾವು ಬೆಳೆ ತಜ್ಞ

ತೋಟಗಳಲ್ಲಿನ 100 ಗಿಡಗಳ ಪೈಕಿ 7 ಗಿಡಗಳಲ್ಲಿ ಮಾತ್ರ ಕಾಯಿ ನಿಂತಿವೆ. ಉಳಿದವು ಹೂ, ಹೀಚಾಗಿ ಕಮರಿ ಹೋಗಿವೆ. ಇನ್ನುಳಿದ ಮಿಡಿಗಳು ಹಳದಿಯಾಗಿ ಉದುರುತ್ತಿವೆ. ಈ ವರ್ಷ ಮಾವು ಬೆಳೆದವರಿಗೆ ಮತ್ತೆ ನೋವು.

• ಕಲ್ಲನಗೌಡ ಪಾಟೀಲ,
ಕ್ಯಾರಕೊಪ್ಪ ರೈತ

ಪ್ರತಿ ರಾತ್ರಿ ಬೆಳೆಗಳಿಗೆ ಸಂಗೀತ ಕೇಳಿಸುವ ಬಾಗಲಕೋಟೆ ತೇರದಾಳದ ರೈತ

ಸಾವಯವ ಕೃಷಿಯಲ್ಲಿ ಮಾದರಿಯಾದ ಧರೆಪ್ಪ ಕಿತ್ತೂರ

INDUS 555-D TMT Presents
ರೈತ ರತ್ನ ಪ್ರಶಸ್ತಿ Season 2
Co Presented by
ಅಗ್ರಿಮೇಟ್
asianet ಸುವರ್ಣ ನ್ಯೂಸ್
ಕನ್ನಡಪ್ರಭ
Special Partner
ಸದ್ಗುರು ಆಯುರ್ವೇದ
Powered by
VSTAAR NONI JUICE

ಕನ್ನಡ ಪ್ರಭ-ಸುವರ್ಣ ನ್ಯೂಸ್ ಪ್ರದಾನ ಮಾಡುವ ರೈತರತ್ನ 2022 ಪ್ರಶಸ್ತಿ ಬಾಗಲಕೋಟೆ ತೇರದಾಳದ ರೈತ ಧರೆಪ್ಪ ಕಿತ್ತೂರ ಅವರಿಗೆ ಸಂದಿದೆ. ಸಾಧಕ ರೈತನಿಗೆ ಗೌರವ ಸಮರ್ಪಣೆ.



• ಶಿವಾನಂದ ಮಹಾಬಲಶೆಟ್ಟಿ

ಸುಮಾರು 30 ವರ್ಷಗಳ ಹಿಂದೆ 1991ರಲ್ಲಿ ಸಾವಯವ ಕೃಷಿಯಲ್ಲಿ ತೊಡಗಿದ ಧರೆಪ್ಪ ಅವರನ್ನು ಕಂಡು ಬಹುತೇಕರು ಮೂದಲಿಸಿದ್ದರು. ಆದರೆ ಛಲಬಿಡದ ತ್ರಿವಿಕ್ರಮನಂತೆ ಕೃಷಿ ಮಾಡಿದ ರೈತ ಧರೆಪ್ಪ ಇಂದು ಸಾವಯವ ಕೃಷಿಯಲ್ಲಿ ಬಹುಬೆಳೆ ಬೆಳೆದು ಆರ್ಥಿಕವಾಗಿ ಸಬಲರಾಗಿ ತಮ್ಮ ಗ್ರಾಮಕ್ಕಷ್ಟೇ ಅಲ್ಲ ಇಡೀ ದೇಶಕ್ಕೆ ಮಾದರಿಯಾಗಿದ್ದಾರೆ.

ಬಾಗಲಕೋಟೆಯ ತೇರದಾಳದ ಧರೆಪ್ಪ ಒಟ್ಟು 18 ಎಕರೆ ಭೂಮಿ ಹೊಂದಿದ್ದಾರೆ. ತೇರದಾಳ-ಕಾಲತಿಪ್ಪಿ ಮುಖ್ಯರಸ್ತೆಗೆ ಅಂಟಿಕೊಂಡಿರುವ 10 ಎಕರೆ ಜಮೀನಿನಲ್ಲಿ ಸಂಪೂರ್ಣ ಸಾವಯವ ಪದ್ಧತಿಯಲ್ಲಿ ಬಹು ಬೆಳೆ ಬೆಳೆಯುತ್ತಿದ್ದಾರೆ. ಬೇರೆ ಪ್ರದೇಶದಲ್ಲಿರುವ 8 ಎಕರೆ ಭೂಮಿಯಲ್ಲಿ ಕಬ್ಬು ಬೆಳೆಯುತ್ತಾರೆ. ಜತೆಗೆ 20 ಗುಂಟೆ ಭೂಪ್ರದೇಶದಲ್ಲಿ ವಿವಿಧ ತರಕಾರಿ ಬೆಳೆದು ವರ್ಷವಿಡೀ ಮನೆ ವೆಚ್ಚ ಮತ್ತು ನಿರ್ವಹಣೆಯ ವೆಚ್ಚ ಸರಿದೂಗಿಸಿಕೊಳ್ಳುತ್ತಾರೆ.

ಇವರ ಕುಟುಂಬವೇ ಇವರ ಸಾಧನೆಯ ಹಿಂದೆ ಇರುವ ಶಕ್ತಿ. ಅವರ ಕುಟುಂಬದಲ್ಲಿ 12 ಜನ ಸದಸ್ಯರಿದ್ದು ಎಲ್ಲರೂ ದಿನವಿಡೀ ಕೃಷಿ ಕಾಯಕದಲ್ಲಿ ತೊಡಗುತ್ತಾರೆ. ಇವರ ಜಮೀನಿನಲ್ಲಿ ಸರ್ವ ಕಾಲಮಾನಕ್ಕೆ ಹೊಂದುವ ದೀರ್ಘಾವಧಿ ಇಳುವರಿ ನೀಡುವ ಹಾಗೂ ಆಯಾ ಕಾಲಮಾನಕ್ಕೆ ತಕ್ಕುದಾದ ಅಲ್ಪಾವಧಿಯ ಇಳುವರಿ ನೀಡುವ ವೈವಿಧ್ಯಮಯ ಬೆಳೆಗಳು ನೋಡಲು ಸಿಗುತ್ತವೆ. ದೇಸಿ ಮೂಲದ ತೆಂಗು, ನುಗ್ಗೆ, ಅಡಕೆ, ಮಾವು ಇತ್ಯಾದಿಗಳಿಂದ ಹಿಡಿದು ವಿದೇಶಿ ಮೂಲದ ಕಾಫಿ, ಬಟರ್‌ಫ್ರೂಟ್, ನಿಯಾಜಾಕಿ ಮಾವು, ಔಷಧೀಯ ಗುಣವುಳ್ಳ ಕಪ್ಪುಗೋಧಿ, ಗುಡ್ಡದನೆಲ್ಲಿ, ಸಿಲ್ವರ್ ಓಕ್ ಗಿಡಗಳನ್ನೂ ಬೆಳೆಸಿದ್ದಾರೆ.

ಸಾವಯವ ಪದ್ಧತಿಯಲ್ಲಿ ಕಬ್ಬನ್ನು 6 ಅಡಿಗೊಂದು ಕಣ್ಣು ನಾಟಿ ಮಾಡಿದ್ದು, 1 ಎಕರೆಗೆ 4 ಕ್ವಿಂಟಾಲ್ ಮಾತ್ರ ಬೀಜ ನಾಟಿ ಮಾಡುತ್ತಾರೆ. ಇದರಿಂದ ಹೇರಳವಾಗಿ ಗಾಳಿ-ಬೆಳಕು ದೊರೆಯುವುದರಿಂದ ಫಸಲಿನಲ್ಲಿ ಹೆಚ್ಚಳವಾಗುತ್ತದೆ ಎನ್ನುತ್ತಾರೆ. ಕಬ್ಬಿನಲ್ಲಿ ಅಂತರಬೆಳೆಯಾಗಿ ತರಕಾರಿ ಸೊಪ್ಪುಗಳಾದ ಮೆಂತ್ಯ, ಸಬ್ಬಸಗಿ, ಕೊತ್ತಂಬರಿ, ಪಾಲಕ್, ಉಳ್ಳಾಗಡ್ಡಿ, ಶೇಂಗಾ, ಮೂಲಂಗಿ, ಚವಳಿಕಾಯಿ ಇತ್ಯಾದಿ ಬೆಳೆಯುತ್ತಾರೆ.

'ಅಮಾವಾಸ್ಯೆ ಮುಂದಿಟ್ಟುಕೊಂಡು ಬೀಜ ಬಿತ್ತಬೇಕು. ಹುಣ್ಣಿಮೆ ಮುಂದಿಟ್ಟುಕೊಂಡು ಸಸಿ ನಾಟಿ ಮಾಡಬೇಕು. ಭೂಗರ್ಭದಲ್ಲಿರುವ ಜಲದಲ್ಲೂ ಈ ಅವಧಿಯಲ್ಲಿ ನೀರಿನ ಉಬ್ಬರವಿಳಿತ ಕಂಡುಬರುತ್ತದೆ. ಹೀಗಾಗಿ, ಬೇರು ಮತ್ತು ಕಾಂಡದ ಬೆಳವಣಿಗೆಗೆ ಇದು ಪೂರಕವಾಗಿರುತ್ತದೆ. ಬೆಳೆಯ ಪ್ರಮಾಣದಲ್ಲಿ ಹೆಚ್ಚಳವಾಗುತ್ತದೆ. ಇದಕ್ಕೆ ವೈಜ್ಞಾನಿಕ ವಾಗಿಯೂ ಹಲವು ಕಾರಣಗಳಿವೆ' ಎನ್ನುತ್ತಾರೆ ಧರೆಪ್ಪ.

'ನಾಟಿ ಮಾಡಿದ ಬೀಜಗಳನ್ನೇ ಕಾಯ್ದುಕೊಂಡಿರುವುದರಿಂದ ಬಿತ್ತನೆಗೆ ಯಾವತ್ತೂ ಅಡಚಣೆಯಾಗಿಲ್ಲ. ತೋಟದೆಲ್ಲೆಡೆ 200 ಮೀಟರ್ ಅಂತರದಲ್ಲಿ ನಿತ್ಯ ರಾತ್ರಿ 10ರಿಂದ ನಸುಕಿನ 4ರವರೆಗೆ ಬೆಳೆಗಳಿಗೆ ತಬಲಾ, ಶಹನಾಯಿ, ಜಲತರಂಗ, ಕೊಳಲು ವಾದನ ಹಾಗೂ ಶಾಸ್ತ್ರೀಯ ಸಂಗೀತ ಕೇಳಿಸುವಂತೆ ವ್ಯವಸ್ಥೆಗೊಳಿಸಿದ್ದಕ್ಕೆ ನಮ್ಮ ಬೆಳೆಯಲ್ಲಿ ಸಾಕಷ್ಟು ಧನಾತ್ಮಕ ಬೆಳವಣಿಗೆಯಾಗಿದೆ. ಇದಕ್ಕೆ ವಿಜ್ಞಾನಿ ಸರ್ ಜಗದೀಶಚಂದ್ರ ಬೋಸ್ ಅವರೇ ಪ್ರೇರಣೆ. ಅವರು ಸಾಬೀತುಪಡಿಸಿರುವಂತೆ ಸಸಿಗಳಿಗೂ ಜೀವವಿದೆ. ಸಂಗೀತಕ್ಕೆ ಸ್ಪಂದಿಸುವ ಗುಣವಿದೆ' ಎಂದು ಹೇಳುತ್ತಾರೆ.

ಧರೆಪ್ಪ ತಮ್ಮ ಜಮೀನಿನಲ್ಲಿ 2 ಸೋಲಾರ್ ಪಂಪ್‌ಸೆಟ್





ಗಳನ್ನು ಸರ್ಕಾರದ ಹೆಸ್ಕಾಂ ಯೋಜನೆಯಡಿ ಅಳವಡಿಸಿಕೊಂಡಿದ್ದಾರೆ. ನರೇಗಾ ಯೋಜನೆಯಡಿ 21 ಮೀಟರ್ ಉದ್ದ ಮತ್ತು ಅಗಲ ಹಾಗೂ 3 ಮೀಟರ್ ಆಳದ ಕೃಷಿಹೊಂಡ ನಿರ್ಮಾಣ ಮಾಡಿದ್ದು, ಅದರಲ್ಲಿ 1 ಸಾವಿರ ರೋಬೋ ಮತ್ತು ಕಾಟ್ಲಾ ಜಾತಿಯ ಮೀನು ಸಾಕಣೆ ಮಾಡಿದ್ದಾರೆ. ಕೃಷಿಹೊಂಡದ ಮೇಲೆ ಕೋಳಿ ಸಾಕಣೆಯನ್ನೂ ಆರಂಭಿಸಿದ್ದಾರೆ. ತಮ್ಮ ಜಮೀನಿನಲ್ಲಿರುವ 2 ಬೋರ್‌ವೆಲ್‌ಗಳಲ್ಲಿ ಒಂದಕ್ಕೆ ಮಳೆನೀರು ಕೊಯ್ಲು ಪದ್ಧತಿ ಅಳವಡಿಸಿದ್ದಾರೆ. ಹೀಗಾಗಿ ಆ ಬೋರ್‌ವೆಲ್‌ನಲ್ಲಿ ಬೇಸಿಗೆಯಲ್ಲೂ ನೀರು ಬತ್ತುವುದಿಲ್ಲ.

ಅರಿಸಿನ, ಗೋಧಿ, ಕಡಲೆಹಿಟ್ಟು, ಹೆಸರು, ಉದ್ದು ಮೊದಲಾದ ಬೆಳೆಗಳನ್ನು ಮೌಲ್ಯವರ್ಧಿಸಿ ನೇರ ಗ್ರಾಹಕರಿಗೆ ನೀಡುವ ಮೂಲಕ ತಮ್ಮ ಬೆಳೆಗಳನ್ನು ಇವರೇ ನೇರವಾಗಿ ಮಾರುಕಟ್ಟೆ ಮಾಡುತ್ತಿದ್ದಾರೆ. 10 ಆಡು, 1ಹೋತಗಳನ್ನು ಸಾಕಿಟದ್ದಾರೆ. ಬೀಜದ ಹೋತದಿಂದ ಉತ್ತಮ ಆದಾಯವಿದೆ. ಅಪರೂಪದ ಕೃಷಿ ಸಾಧನೆಗೆ ಹಲವು ಪ್ರಶಸ್ತಿಗಳನ್ನು ಪಡೆದಿರು ಧರೆಪ್ಪ ಕಿತ್ತೂರ ಅವರಿಗೆ ಈಗ ಪ್ರತಿಷ್ಠಿತ ರೈತ ರತ್ನ ಗರಿಮೆ ಸಂದಿದೆ.